# ಅಗಸಗಿತ್ತಿಯ ಹೃದಯಸಂಪನ್ನತೆ

"ಮ್ಯಕಾರ್ಟಿ!", ಉತ್ತರವಿಲ್ಲ. ಮತ್ತೊಮ್ಮೆ ಜೋರಾಗಿ ಅದೇ ಧ್ವನಿ ಮೊಳಗಿತು. "ಮ್ಯ......ಕಾ......ರ್ಟಿ....!", "ಬಂದೇ!" ಎನ್ನುತ್ತಾ ಒಂಬತ್ತು ವರ್ಷದ ಬಾಲಕಿಯು ಶಾಲೆಯ ಚೀಲ ಹಿಡಿದು ಹೊರಗೆ ಚಿಮ್ಮಿದಳು. ತನ್ಮಯಳಾಗಿ ಬಟ್ಟೆ ಒಗೆಯುತ್ತಿದ್ದ ಆ ಪುಟ್ಟ ಬಾಲಕಿಗೆ ಶಾಲೆಗೆ ಸಮಯವಾದದ್ದೇ ಅರಿವಾಗಿರಲಿಲ್ಲ! ಗೆಳತಿಯರಿಬ್ಬರೂ ಕೈಹಿಡಿದುಕೊಂಡು ಆನಂದವಾಗಿ ನಕ್ಕು ನಲಿಯುತ್ತಾ ಓಡಿದರು, ಶಾಲೆಗೆ.

'ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು.' ಈ ಪುಟ್ಟ ಅಗಸ ಗಿತ್ತಿಯ ಬಟ್ಟೆ ಶುಭ್ರಗೊಳಿಸುವುದರಲ್ಲಿನ ಚಮತ್ಕಾರ ಊರಿನಲ್ಲೆಲ್ಲಾ ಹಬ್ಬಿತ್ತು. ವಯಸ್ಸಿನಲ್ಲಿ ಕಿರಿಯವಳಾದರೂ ಬಟ್ಟೆಗಳನ್ನು ಶುಭ್ರವಾಗಿ ಒಗೆಯುತ್ತಿದ್ದಳು. ಸುತ್ತಮುತ್ತಲ ಜನರೆಲ್ಲಾ ತಮ್ಮ ರಾಶಿ ರಾಶಿ ಕೊಳೆ ಬಟ್ಟೆಗಳನ್ನು ತಂದುಹಾಕುತ್ತಿದ್ದರು. ಸಂತೋಷಕೂಟಗಳಿಗಾಗಿ, ಸಮಾರಂಭಗಳಿಗಾಗಿ ಬಟ್ಟೆ ಒಗೆಯುತ್ತಿದ್ದ ಬಾಲಕಿ ಅಂಥ ಒಂದೇ ಒಂದು ಸಮಾರಂಭವನ್ನು ಹುಟ್ಟಿದಾಗಿನಿಂದ ನೋಡಿರಲಿಲ್ಲ. ಶಾಲೆ ಮತ್ತು ಮನೆ ಈ ಎರಡೇ ಅವಳ ಪ್ರಪಂಚವಾಗಿತ್ತು. ತನ್ನ ಪಾಲಿಗೆ ಬಂದ ಬಟ್ಟೆ ಒಗೆಯುವ ಕೆಲಸದಲ್ಲೇ ಅವಳು ಆನಂದವನ್ನು ಕಾಣು ತ್ತಿದ್ದಳು. ಹೀಗೆ ಸಾಗಿತ್ತು ನಮ್ಮ ಕಥಾನಾಯಕಿಯ ಜೀವನ.

ಪ್ರಪಂಚದ ಆಗುಹೋಗುಗಳ ಅರಿವೇ ಇಲ್ಲದ ಈ ಬಾಲಕಿಯ ಜೀವನದಲ್ಲಿ ತಿಂಗಳುಗಳು ಉರುಳಿ ವರ್ಷಗಳಾದವು. ಬಾಲಕಿಯು ಐದನೇ ತರಗತಿಗೆ ಕಾಲಿಡುವ ವೇಳೆಗೆ, ಯಾರ ಅಕ್ಕರೆಯ ಮಡಿಲಲ್ಲಿ ಪ್ರೀತಿ ಮಮತೆಗಳನ್ನುಂಡು ಅವಳು ಬೆಳೆದಿದ್ದಳೋ, ಆ ಪ್ರೀತಿಯ ಅಜ್ಜಿ ತೀವ್ರ ಖಾಯಿಲೆಗೆ ತುತ್ತಾಗಿ ಹಾಸಿಗೆ ಹಿಡಿದಳು. ಪ್ರೀತಿಪಾತ್ರಳಾದ ಅಜ್ಜಿಯ ಕೊನೆಯ ದಿನಗಳಲ್ಲಿ ಆಕೆಯ ಶುಶ್ರೂಷೆ ಮಾಡುವವರು ಯಾರೂ ಇರಲಿಲ್ಲ. ಈಗೇನು ಮಾಡು ವುದು? ಆ ಪುಟ್ಟ ಹೃದಯದಲ್ಲಿ ಅಪಾರವಾದ ನೋವು, ತಳಮಳ. ಓದಿನಲ್ಲಿ ಚುರುಕಾದ ಅವಳ ಪಾಲಿಗೆ ಶಾಲೆ ಒಂದು ಸ್ವರ್ಗವಾಗಿತ್ತು. ಕೊನೆಗೆ ಅಜ್ಜಿಯ ಪ್ರೀತಿಯೇ ಗೆದ್ದಿತು. ಶಾಲಾ ಜೀವನದ ಬಾಗಿಲು ಮ್ಯಕಾರ್ಟಿಯ ಪಾಲಿಗೆ ಶಾಶ್ವತವಾಗಿ ಮುಚ್ಚಿತು.



'ಕಾಯಕವೇ ಕೈಲಾಸ' ವಾಗಿದ್ದ ಮ್ಯಕಾರ್ಟಿಯ ಜೀವನದಲ್ಲಿ ಮುಂಬರುವ ವರ್ಷಗಳಲ್ಲಿ ಅನೇಕ ಮಾರ್ಪಾಟುಗಳಾದವು. ಪ್ರೀತಿಯ ಅಜ್ಜಿ, ತಂದೆ, ತಾಯಿ, ಒಡಹುಟ್ಟಿದವರು ಹೀಗೆ ಒಬ್ಬರಾದ ನಂತರ ಒಬ್ಬರು ಈ ವಿಶಾಲ ಪ್ರಪಂಚದಲ್ಲಿ ಮ್ಯಕಾರ್ಟಿಯೊಬ್ಬಳನ್ನೇ ಬಿಟ್ಟು ಅಗಲಿಹೋದರು. ಯೌವನಾವಸ್ಥೆಗೆ ಕಾಲಿಟ್ಟ ಮ್ಯಕಾರ್ಟಿಯ ಜೀವನದಲ್ಲಿ ಒಂಟಿತನವಾಗಲಿ, ಬೇಸರವಾಗಲಿ, ಜುಗುಪ್ಸೆಯಾಗಲಿ ಒಂದು ದಿನವೂ ಕಾಡಲಿಲ್ಲ. ದಿನನಿತ್ಯ ಅದೇ ಕೆಲಸ – ನಿರ್ಲಿಪ್ತಳಾಗಿ ಬಟ್ಟೆ ಒಗೆಯುವ ಕೆಲಸದಲ್ಲಿ ನಿರತಳಾಗಿದ್ದಳು. ಅವಳ ಜೀವನದಲ್ಲಿ ಆಪ್ತ ಸಂಗಾತಿಯೆಂದರೆ ಒಂದು ಹಳೇ ಬೈಬಲ್. ಇದೊಂದೇ ಅವಳ ಚಿರಾಸ್ತಿಯಾಗಿತ್ತು. ಅದನ್ನು ಬಹಳ ಶ್ರದ್ಧೆ ಭಕ್ತಿಗಳಿಂದ ಒಂದು ರೇಷ್ಮೆ ಬಟ್ಟೆಯಲ್ಲಿ ಸುತ್ತಿಟ್ಟಿದ್ದಳು. ತಾನು ಮದುವೆಯಾಗಿ ಎಲ್ಲರಂತೆ ಸಂಸಾರ ಹೂಡಬೇಕೆಂಬ ಆಲೋಚನೆ ಒಮ್ಮೆಯೂ ಅವಳ ಮನಸ್ಸಿನಲ್ಲಿ ಮೂಡಲಿಲ್ಲ. ಬಹಳ ವರ್ಷಗಳ ಕಾಲ ಒಂಟಿ ಜೀವನ ನಡೆಸುತ್ತಿದ್ದ ಮ್ಯಕಾರ್ಟಿಯು ತನ್ನ ಆವಶ್ಯಕತೆಗಳನ್ನು ಪೂರೈಸಿಕೊಂಡು ಉಳಿದ ಹಣವನ್ನೆಲ್ಲಾ ಬ್ಯಾಂಕಿಗೆ ಜಮಾಯಿಸುತ್ತಿದ್ದಳು.

ಕಾಲಚಕ್ರ ಯಾರಿಗೂ ಕಾಯದೆ ಉರುಳುವುದು. ಅಗಸಗಿತ್ತಿಯು ಈಗ ಮುದುಕಿಯಾಗಿದ್ದಾಳೆ. ಆದರೆ ಬಟ್ಟೆ ಶುಭ್ರಗೊಳಿಸುವುದರಲ್ಲಿ ಅದೇ ತನ್ಮಯತೆ! ಅದೇ ಆಸಕ್ತಿ!